**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 08-06-2026:**

**ಮುಂದುವರೆದ ಪಾಟೀಸವಾಲುಃ ಆರೋಪಿ ಪರ ಶ್ರೀ ವಕೀಲರಿಂದಃ**

44.ನನ್ನ ತನಿಖಾ ಕಾಲದಲ್ಲಿ ಆರೋಪಿತರಿಗೆ ಮನೆ ಬಾಡಿಗೆ ಆದಾಯ ಇತ್ತು ಎನ್ನುವುದು ಗೊತ್ತಿತ್ತು ಎಂದರೆ ಸಾಕ್ಷಿಯು ಎಂ ಐ ಜಿ ಮನೆಯಿಂದ ಬಾಡಿಗೆ ಬರುತ್ತಿತ್ತು ಅದನ್ನು ಪರಿಗಣಿಸಿದ್ದೇನೆ ಎನ್ನುತ್ತಾರೆ. ಶ್ರೀಮತಿ ಚಂದ್ರಮ್ಮ, ಕೃಷ್ಣಪ್ಪ, ಕಮಲಮ್ಮ, ಪ್ರೇಮ, ಇವರೆಲ್ಲರೂ ಆ ಎಂ ಐ ಜಿ ಮನೆಯ ಬಾಡಿಗೆದಾರರಾಗಿದ್ದರು ಎಂದರೆ ಸಾಕ್ಷಿಯು ನಿಂಗರಾಜಮ್ಮ ಎನ್ನುವವರು ಮಾತ್ರ ಬಾಡಿಗೆದಾರರಾಗಿದ್ದರು ಎನ್ನುತ್ತಾರೆ. ನನಗೆ ನನ್ನ ತನಿಖಾ ಕಾಲದಲ್ಲಿ ಮೇಲೆ ಹೇಳಿದ ವ್ಯಕ್ತಿಗಳನ್ನು ವಿಚಾರಣೆ ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ದಿಃ13-1-2011 ರಂದು ಆ ಎಂಐಜಿ ಮನೆಯ ಅಕ್ಕಪಕ್ಕದವರನ್ನು ವಿಚಾರಣೆ ಮಾಡಿರುತ್ತೇನೆ ಎನ್ನುತ್ತಾರೆ. ನಾನು ದುರುದ್ದೇಶಪೂರಿತವಾಗಿ ಈ ಮೇಲೆ ಹೇಳಿದ ಬಾಡಿಗೆದಾರರನ್ನು ವಿಚಾರಣೆ ಮಾಡಿ ಅವರ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆ ಅಕ್ಕಪಕ್ಕದವರನ್ನು ನಾನು ವಿಚಾರಣೆ ಮಾಡಿದ ಬಗ್ಗೆ ಸದರಿಯವರು ಅಲ್ಲಿ ವಾಸವಿದ್ದಾರೆ ಎನ್ನುವ ಬಗ್ಗೆ ಯಾವುದೇ ದಾಖಲೆಯನ್ನು ನಾನು ಪಡೆದುಕೊಂಡಿಲ್ಲ. ನಾನು ಭಾಗ್ಯಮ್ಮ ಎಂಬುವವರನ್ನು ಅಲ್ಲಿ ವಿಚಾರ ಮಾಡಿದೆನು, ಆಗ ಅವರು ಮೇಲೆ ಹೇಳಿದ ಬಾಡಿಗೆದಾರರು ಅಲ್ಲಿ ವಾಸ ಮಾಡುತ್ತಿದ್ದಾರೆ ಎಂದು ಅವರು ಎಷ್ಟೆಷ್ಟು ಬಾಡಿಗೆ ಕೊಡುತ್ತಿದ್ದಾರೆಂದು ಅವರಿಗೆ ಹೇಳಲಾಗುವುದಿಲ್ಲ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಹಾಗೆಯೇ ಅಲ್ಲಿ ಚಂದ್ರಮ್ಮ ಎಂಬುವವರು ಕೂಡ ಅಲ್ಲಿ 2-3 ವರ್ಷಗಳವೆರಗೆ ಬಾಡಿಗೆಗೆ ವಾಸ ಇದ್ದರು ಎಷ್ಟು ಬಾಡಿಗೆ ಕೊಡುತ್ತಿದ್ದರೆಂದು ಹೇಳಲಾಗುವುದಿಲ ಎಂದು ಹೇಳಿದರು ಎಂದರೆ ಸರಿಯಲ್ಲ. ಅದೇ ರೀತಿ ಕೃಷ್ಣಪ್ಪ ಕಮಲಮ್ಮ ಎಂಬುವವರು ಕೂಡ 2-3 ವರ್ಷಗಳ ಕಾಲ ಬಾಡಿಗೆಗೆ ಇದ್ದರು ಅವರೂ ಕೂಡ ಎಷ್ಟು ಬಾಡಿಗೆ ಕೊಡುತ್ತಿದ್ದರೆಂದು ಹೇಳಲಾಗುವುದಿಲ್ಲ ಎಂದು ಹೇಳಿದರು ಎಂದರೆ ಸರಿಯಲ್ಲ.

45.ಅದೇ ರೀತಿ ನಾನ ಚಾಸಾ-50 ನಾಗರಾಜು ಎಂಬುವವರಿಗೆ ವಿಚಾರಣೆ ಮಾಡಿದೆನು, ಆಗ ಅವರು ಕೆ ಹೆಚ್ ಬಿ ಕಾಲೋನಿಯಲ್ಲಿ ಆರೋಪಿಗೆ ಸೇರಿದ ಮನೆಯಲ್ಲಿ ಕೂಡ ಬಾಡಿಗೆದಾರರು ಇದ್ದರು, ಬಾಡಿಗೆ ಕೊಡುತ್ತಿದ್ದರು ಎಂದು ನನಗೆ ಹೇಳಿರುತ್ತಾರೆ ಎಂದರೆ ಸಾಕ್ಷಿಯು ಎಂಐಜಿ

ಮನೆಯಲ್ಲಿ ನಿಂಗರಾಜಮ್ಮ ಮಾತ್ರ ಬಾಡಿಗೆಗೆ ಇದ್ದರು, ಬಾಡಿಗೆ ಕೊಡುತ್ತಿದ್ದರು ಎಂದು ಹೇಳಿರುತ್ತಾರೆ ಎನ್ನುತ್ತಾರೆ. ಅವರು ನಂಜೇಗೌಡ ಮತ್ತು ನಿಂಗರಾಜಮ್ಮ ಎಂಬುವವರು ಅಲ್ಲಿ ಬಾಡಿಗೆಗೆ ಇದ್ದರು ಎಂದರೆ ಸಾಕ್ಷಿಯು ನಂಜೇಗೌಡರ ಬಗ್ಗೆ ಹೇಳಿಲ್ಲ ನಿಂಗರಾಜಮ್ಮ ಇದ್ದರು ಎಂದು ಹೇಳಿರುತ್ತಾರೆ ಎನ್ನುತ್ತಾರೆ. ನಾನು ಅಲ್ಲಿ ಸ್ವತಃ ಹೋಗಿ ವಿಚಾರಿಸಿದ್ದರೆ ಯಾರು ಯಾರು ಇದ್ದರು, ಮತ್ತು ಎಷ್ಟು ಬಾಡಿಗೆ ಕೊಡುತ್ತಿದ್ದರು ಎಂದು ತಿಳಿದುಬರುತ್ತಿತ್ತು ಆದರೆ ನಾನು ಸ್ವತಃ ಅಲ್ಲಿಗೆ ಹೋಗಿ ವಿಚಾರಣೆ ಮಾಡಿಲ್ಲ ಆದ್ದರಿಂದಲೇ ಗೊತ್ತಿಲ್ಲ ಎಂದರೆ ಸರಿಯಲ್ಲ. ಚಾಸಾ-50ರವರು ಕೆಹೆಚ್‌ಬಿ ಕಾಲೋನಿಯಲ್ಲಿ ಪ್ರಾವಿಜನ್ ಸ್ಟೋರನ್ನು ಇಟ್ಟುಕೊಂಡಿದ್ದರು, ಮೇಲೆ ಹೇಳಿದ ಬಾಡಿಗೆದಾರರು ಅಲ್ಲಿಗೆ ಸಾಮಾನು ಖರೀದಿಸಲು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿತರು ಸಲ್ಲಿಸಿದ ಅನುಬಂಧಗಳ ಜೊತೆಗೆ ತಮಗೆ ಬಾಡಿಗೆ ಎಷ್ಟು ಬರುತ್ತಿತ್ತು ಎನ್ನುವ ಬಗ್ಗೆ ದಾಖಲೆ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿಯವರು 1998ರ ಎಪಿಆರ್ ನಲ್ಲಿ ಅವರು ವರ್ಷಕ್ಕೆ ತಮಗೆ ಎಲ್ಐ ಜಿ 73ರ ಮನೆಯಿಂದ 6000ರೂ ಬಾಡಿಗೆ ಬರುತ್ತಿತೆಂದು ಘೋಷಿಸಿಕೊಂಡಿದ್ದರು ಎನ್ನುತ್ತಾರೆ. ಆರೋಪಿತರು ತಮ್ಮ ಆಸ್ತಿ ಮತ್ತು ದಾಯತ್ವದ ದಾಖಲೆಯನ್ನು ಅವರು ಇಲಾಖೆಗೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಕೇವಲ 12 ವರ್ಷ ಸಲ್ಲಿಸಿದ್ದರು ಎನ್ನುತ್ತಾರೆ. ಆಸ್ತಿ ಮತ್ತು ದಾಯತ್ವದ ಸ್ಟೇಟ್ಮೆಂಟ್ ಅಲ್ಲದೆ ಅವರು ಎಲ್ಲಾ ವಿವರಗಳನ್ನು ಕಾಣಿಸಿರುತ್ತಾರೆ ಎಂದರೆ ಸರಿಯಲ್ಲ. ಅವರು ಪೂರ್ತ ಉತ್ತರವನ್ನು ಕೊಟ್ಟಿಲ್ಲ ಎಂದು ಅವರ ಇಲಾಖೆಯವರು ಅವರ ಮೇಲೆ ಯಾವುದೇ ಕಾನೂನು ಕ್ರಮ ಕೈಗೊಂಡಿಲ್ಲ ಎಂದರೆ ಸಾಕ್ಷಿಯು ಅದು ಅವರ ಇಲಾಖೆಗೆ ಬಿಟ್ಟದ್ದು ಅವರು ನೀಡಿದ 12 ವರ್ಷದ ದಾಖಲೆಯನ್ನು ನಾನು ಪರಿಶೀಲಿಸಿ ಪರಿಗಣಿಸಿರುತ್ತೇನೆ ಎನ್ನುತ್ತಾರೆ.

46.ರೈಲ್ವೆ ಇಲಾಖೆಯವರು ಆರೋಪಿತರ ಆಸ್ತಿಯನ್ನು ಭೂಸ್ವಾಧೀನಪಡಿಸಿಕೊಂಡಿರುತ್ತಾರೆ ಅದಕ್ಕೆ ಅವರು ಪರಿಹಾರ ಕೂಡ ಕೊಟ್ಟಿದ್ದರು ಎಂದರೆ ಸಾಕ್ಷಿಯು ಹೌದು 58500ರೂಪಾಯಿ ಪರಿಹಾರದ ಹಣ ಬಂದಿತ್ತು ಅದನ್ನು ಪರಿಗಣಿಸಿರುತ್ತೇನೆ ಎನ್ನುತ್ತಾರೆ. ದಿನಾಂಕ 17-1-11ರಂದು ಭೂಸ್ವಾಧೀನಾಧಿಕಾರಿಗಳು ನೀಡಿದ ಮಾಹಿತಿಯಂತೆ ದಿನಾಂಕ 15-7-2000ದಂದು ರೂ43,000, ಹಾಗೂ 26-2-2001ಕ್ಕೆ 15500ರೂಪಾಯಿಗಳನ್ನು ಒಟ್ಟು 58500ರೂಪಾಯಿಗಳನ್ನು ಪರಿಹಾರವಾಗಿ

ನೀಡಿರುವುದಾಗಿ ತಿಳಿಸಿರುತ್ತಾರೆ. ಈಗ ನನಗೆ ತೋರಿಸಿದ ದಾಖಲೆ ಆರೋಪಿತರಿಗೆ ಹಣ ಪಾವತಿಸಿದ ಬಗ್ಗೆ ವೋಚರ್ ನ ದೃಢೀಕೃತ ನಕಲು ಎಂದರೆ ಸರಿ. ಸದರಿ ದಾಖಲೆಯನ್ನು **ನಿಡಿ-5** ಎಂದು ಗುರುತಿಸಲಾಯಿತು. ಇದು ಒಟ್ಟು 3 ಹಾಳೆಗಳನ್ನೊಳಗೊಂಡಿರುತ್ತದೆ. ದಿನಾಂಕ 29-9-2004ರಂದು ರೈಲ್ವೇ ಇಲಾಖೆಯವರು ಆರೋಪಿತರಿಗೆ 22,993ರೂಪಾಯಿ ಹಣವನ್ನು ಸದರಿ ಭೂಸ್ವಾಧೀನವಾದ ಸ್ವತ್ತಿನ ಬಾಬ್ತು ಪರಿಹಾರದ ಹಣವನ್ನು ನೀಡಿರುತ್ತಾರೆ ಮತ್ತು ಅದನ್ನು ನಾನು ಪರಿಗಣಿಸಿಲ್ಲ ಎಂದರೆ ಸಾಕ್ಷಿಯು ನನಗೆ ಆ ಬಗ್ಗೆ ಯಾವುದೇ ದಾಖಲೆ ನೀಡಿಲ್ಲ ಎನ್ನುತ್ತಾರೆ. ಈಗ ನನಗೆ ತೋರಿಸಿದ ದಾಖಲೆ ಅದಕ್ಕೆ ಸಂಬಂಧಿಸಿದ್ದು ಎಂದರೆ ನನಗೆ ನೀಡಿಲ್ಲ ಎನ್ನುತ್ತಾರೆ. ಈ ದಾಖಲೆಯನ್ನು **ನಿಡಿ-6** ಎಂದು ಗುರುತಿಸಲಾಯಿತು. ಇದು 2 ಹಾಳೆಗಳನ್ನೊಳಗೊಂಡಿರುತ್ತದೆ. ಈ ದಾಖಲೆಯನ್ನು ನನಗೆ ನೀಡಿದ್ದರೂ ಕೂಡ ಅದನ್ನು ನಾನು ಉದ್ದೇಶಪೂರ್ವಕವಾಗಿ ಪರಿಗಣಿಸಿಲ್ಲ ಎಂದರೆ ಸರಿಯಲ್ಲ.

47.ತನಿಖಾ ಕಾಲದಲ್ಲಿ ನಾನು ಆರೋಪಿತರ ಬ್ಯಾಂಕ್ ಸ್ಟೇಟ್ಮೆಂಟ್ ನ್ನು ಪಡೆದುಕೊಂಡಿದ್ದೆನು ಎಂದರೆ ನಿಜ. ಹಾಗೆಯೇ ಅವರ ಹೆಂಡತಿ ಜಯಲಕ್ಷ್ಮಿರವರ ಬ್ಯಾಂಕ್ ಸ್ಟೇಟ್ಮೆಂಟ್ ನ್ನು ಕೂಡ ಪಡೆದುಕೊಂಡಿದ್ದೇನೆ ಎಂದರೆ ಸರಿ. ತನಿಖಾ ಕಾಲದಲ್ಲಿ ಬ್ಯಾಂಕಿನವರು, ನನಗೆ ಈಗ ತೋರಿಸಿದ ಬ್ಯಾಂಕ್ ಸ್ಟೇಟ್ಮೆಂಟ್ ನ್ನು ಆರೋಪಿತರ ಹೆಂಡತಿಗೆ ಸಂಬಂಧಪಟ್ಟಂದತೆ ನೀಡಿರುತ್ತಾರೆ ಎಂದರೆ ನಿಜ. ಇದನ್ನು **ನಿಡಿ-7** ಎಂ ದು ಗುರುತಿಸಲಾಯಿತು. ನಿಡಿ-7ರಲ್ಲಿ ಆರೋಪಿತರ ಹೆಂಡತಿಯ ಖಾತೆಗೆ 22993ರೂಪಾಯಿ ಜಮಾ ಆಗಿದೆ ಎನ್ನುವುದು ಕಂಡುಬರುತ್ತದೆ ಎಂದರೆ ಸರಿ. ಈಗ ತೋರಿಸಿದ ದಾಖಲೆಯಂತೆ ಆರೊಪಿತರ ಹೆಂಡತಿಯ ಹೆಸರಿಗೆ 22993ರೂಪಾಯಿ ಹಣ ಪಾವತಿಯಾಗಿರುವುದು ಕಂಡುಬರುತ್ತದೆ ಎಂದರೆ ಸಾಕ್ಷಿಯು ಅದು ಸಂದಾಯವಾಗಬೇಕಾಗಿರುವ ಮೊತ್ತ ಎಂದು ಕಾಣಿಸಿದ್ದಾರೆ ಎನ್ನುತ್ತಾರೆ. ಸದರಿ ದಾಖಲೆಯನ್ನು ನಿಡಿ-8 ಎಂದು ಗುರುತಿಸಲಾಯಿತು.

48.ದಿನಾಂಕ 28-10-2004ರಂದು ಆ ಹಣವನ್ನು ಆರೋಪಿತರ ಹೆಂಡತಿಗೆ ಪಾವತಿಸಿರುತ್ತಾರೆ ಎಂದರೆ ಸಾಕ್ಷಿಯು ಆ ದಾಖಲೆಯನ್ನು ಭೂಸ್ವಾಧೀನಾಧಿಕಾರಿಗಳು ನನಗೆ ಕಳುಹಿಸಿಕೊಟ್ಟಿಲ್ಲ ಎನ್ನುತ್ತಾರೆ. ಆ ಹಣವನ್ನು ಚೆಕ್ ಮೂಲಕ ಅವರ ಖಾತೆಗೆ ಕಳುಹಿಸಿದ್ದು ಅದು ತಿಳಿದಿದ್ದರೂ ಕೂಡ

ಅದನ್ನು ಪರಿಗಣಿಸದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅಂಶವು ನಾನು ನನ್ನ ತನಿಖಾ ಕಾಲದಲ್ಲಿ ಚಾಸಾ-80 ಮಂಜೇಗೌಡ ಎಂಬುವವರನ್ನು ವಿಚಾರಣೆ ಮಾಡಿದಾಗ ತಿಳಿದುಬಂತು ಎಂದರೆ ಸರಿಯಲ್ಲ. ಅವರು ತಮ್ಮ ಹೇಳಿಕೆಯಲ್ಲಿ ಆ ಹಣ ಪಾವತಿಯಾಗಿರುವ ಬಗ್ಗೆ ತಿಳಿಸಿದ್ದರೂ ಕೂಡ ನಾನು ಅದನ್ನು ಪರಿಗಣಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-82ರವರನ್ನು ವಿಚಾರಣೆ ಮಾಡಿದಾಗ ಅವರು ಆರೋಪಿತರು ಹೊಂದಿರುವ ಹಸು ಮತ್ತು ಅವುಗಳ ಆದಾಯದ ಬಗ್ಗೆ ನನಗೆಹೇಳಿದ್ದರು ಎಂದರೆ ಸಾಕ್ಷಿಯು ಆರೋಪಿತರು ಹೊಂದಿದ್ದ 2 ಹಸುಗಳಿಂದ ಬಂದಿದ್ದ ಆದಾಯ 61674ರೂಪಾಯಿ ಮತ್ತು ಖರ್ಚು 17155ರೂಪಾಯಿ ಎಂದು ಹೇಳಿರುತ್ತಾರೆ ಎನ್ನುತ್ತಾರೆ. ನಾನು ದುರುದ್ದೇಶಪೂರ್ವಕವಾಗಿ ಆರೋಪಿತರು ಎಷ್ಟು ವರ್ಷಗಳಿಂದ ಹಸು ಸಾಕುತಿದ್ದರು ಮತ್ತು ಎಷ್ಟು ವರ್ಷಗಳಿಂದ ಹಾಲು ಮಾರಾಟ ಮಾಡುತ್ತಿದ್ದರು ಇತ್ಯಾದಿ ಮಾಹಿತಿಯನ್ನು ಚಾಸಾ-82 ರವರಿಗೆ ನಾನು ನೀಡಿಲ್ಲ ಎಂದರೆ ಸಾಕ್ಷಿಯು ಆರೋಪಿತರು ಎಪಿಆರ್ ನಲ್ಲಿ ನೀಡಿದ್ದ ಮಾಹಿತಿಯನ್ನು ಅವರಿಗೆನೀಡಿರುತ್ತೇನೆ ಎನ್ನುತ್ತಾರೆ. ಆರೋಪಿತರು ತಮ್ಮ ಅನುಬಂಧದಲ್ಲಿ ಈ ಬಗ್ಗೆ ದಾಖಲೆ ಕೂಡ ಕೊಟ್ಟಿದ್ದರು ಎಂದರೆ ಸಾಕ್ಷಿಯು ಹೇಳಿಕೊಂಡಿರುತ್ತಾರೆ ದಾಖಲೆ ಕೊಟ್ಟಿಲ್ಲ ಎನ್ನುತ್ತಾರೆ. ಚಾಸಾ-82 ರವರು ನಾನು ಹೇಳಿದಂತೆ ಅವರಿಗೆ ಮನಬಂದ ರೀತಿಯಲ್ಲಿ ನನಗೆ ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅವರು ಅಂದಾಜಿನಲ್ಲಿ ಆ ಮಾಹಿತಿಯನ್ನು ನೀಡಿರುವುದು ಎಂದರೆ ಸರಿಯಲ್ಲ. ಆ ಹಸುಗಳಿಗೆ ಮೇವನ್ನು ಆರೋಪಿತರು ತಮ್ಮ ಜಮೀನಿನಲ್ಲೇ ಬೆಳೆಸುತ್ತಿದ್ದರು, ಆದ್ದರಿಂದ ಅದಕ್ಕೆ ಖರ್ಚು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೋಟ ಇತ್ತು ಎನ್ನುವುದು ಗೊತ್ತು. ಅಲ್ಲಿ ಹುಲ್ಲು ಬೆಳೆಯುತ್ತಿತ್ತು ಎಂದರೆ ಇರಬಹುದು.

49.ಜಯಲಕ್ಷ್ಮಿ ಫ್ಯಾನ್ಸಿ ಸ್ಟೋರ ನ ಬಗ್ಗೆ ನಾನು ಚಾಸಾ-103 ರವರನ್ನು ವಿಚಾರಣೆ ಮಾಡಿರುತ್ತೇನೆ. ಅವರು ನನ್ನ ವಿಚಾರಣಾ ಕಾಲದಲ್ಲಿ ಜಯಲಕ್ಷ್ಮಿ ಫ್ಯಾನ್ಸಿಸ್ಟೋರ ಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದರೆ ಸಾಕ್ಷಿಯು 2006 ರಿಂದ 2009ರವರೆಗಿನ ದಾಖಲೆ ನೀಡಿದ್ದರು ಎನ್ನುತ್ತಾರೆ. ಅವರು ನೀಡಿದ ದಾಖಲೆಗಳ ಪ್ರಕಾರ ಆರೋಪಿತರ ಮಗ ಮಂಜುನಾಥ್ ಆ ಸಂಸ್ಥೆಯ ಪ್ರೊಪ್ರೈಟರ್ ಆಗಿದ್ದರು ಎಂದರೆ ನಿಜ.

50.ಆರೋಪಿತರ ವೇತನದ ಬಗ್ಗೆ ನಾನು ಕೆ ಎಸ್ ಆರ್ ಟಿ ಸಿ ಯ ತಿಮ್ಮಯ್ಯ ಎಂಬುವವರನ್ನು ವಿಚಾರಣೆ ಮಾಡಿ ವೇತನದ ವಿವರ ಪಡೆದಿರುತ್ತೇನೆ ಎಂದರೆ ನಿಜ. ಸಅವರು ಆರೋಪಿತರು ಸಂಸ್ಥೆಗೆ ಸೇರಿದ ದಿನಾಂಕದಿಂದ 2009ರವರೆಗಿನ ವೇತನದ ವಿವರ ನೀಡಿರುತ್ತಾರೆ ಎಂದರೆ ಸಾಕ್ಷಿಯು 1984 ರಿಂದ 2009ರವರೆಗಿನ ಮಾಹಿತಿ ನೀಡಿರುತ್ತಾರೆ ಎನ್ನುತ್ತಾರೆ. ಅವರು ತಮ್ಮ ವಿಚಾರಣಾ ಕಾಲದಲ್ಲಿ ಆರೋಪಿತರು ಪಡೆದುಕೊಂಡು ಒಟ್ಟು ವೇತನ 7,43,877ರೂಪಾಯಿ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಇದರ ಜೊತೆಗೆ ಕಾರ್ಮಿಕ ನ್ಯಾಯಾಲಯದ ಆದೇಶದಂತೆ ವೇತನ ಬಾಕಿ ರೂ.56,204ಗಳನ್ನು ಕೂಡ ಕೊಟ್ಟಿದ್ದರು ಎನ್ನುತ್ತಾರೆ.

51.ಆರೋಪಿತರಿಗೆ 1981 ರಿಂದ 1983ರ ಸೇವಾ ಅವಧಿಯನ್ನು ಪರಿಗಣಿಸಿರಲಿಲ್ಲ ಆದ್ದರಿಂದ ಅವರು ನ್ಯಾಯಾಲಯಕ್ಕೆ ಹೋಗಿದ್ದರು ಎಂದರೆ ಸಾಕ್ಷಿಯು ನಾನು ತೆಗೆದುಕೊಂಡಿರುವುದು 1984-85ರ ಚೆಕ್ ಅವಧಿ ಎನ್ನುತ್ತಾರೆ. ಕಾರ್ಮಿಕ ನ್ಯಾಯಾಲಯದ ಆದೇಶದ ಪ್ರಕಾರ ನೀಡಿರುವ 56,204ರೂಪಾಯಿಯನ್ನು ನಾನು ಪರಿಗಣಿಸಿರುತ್ತೇನೆ ಎಂದರೆ ನಿಜ. 1976ರಿಂದ ಆರೊಪಿತರು ಕೆಲಸ ಮಾಡಿಕೊಂಡಿದ್ದರು ಆ ಆದಾಯವನ್ನು ನಾನು ಪರಿಗಣಿಸಿಲ್ಲ ಎಂದರೆ ಸಾಕ್ಷಿಯು ನಾವು ಚೆಕ್ ಅವಧಿ 1984 ರಿಂದ ಪರಿಗಣಿಸಿರುವುದು ಎನ್ನುತ್ತಾರೆ. ಹಾಗೆಯೆ ಆರೋಪಿತರಿಗೆ ನೀಡಿರುವ 27,000ರೂಪಾಯಿಯನ್ನು ನಾವು ಪರಿಗಣಿಸಿಲ್ಲ ಎಂದರೆ ಸಾಕ್ಷಿಯು ಅವರ ಮೇಲಧಿಕಾರಿಗಳು ಕಳುಹಿಸಿಕೊಟ್ಟಿದ್ದನ್ನು ಪರಿಗಣಿಸಿದ್ದೇವೆ ಎನ್ನುತ್ತಾರೆ. ಮೇಲಧಿಕಾರಿಗಳು ಅದನ್ನು ಕಳುಹಿಸಿಕೊಟ್ಟಿದ್ದರೂ ಕೂಡ ಅದನ್ನು ಪರಿಗಣಿಸಿಲ್ಲ ಎಂದರೆ ಸರಿಯಲ್ಲ. 1991-93 ರ ಅವಧಿಯಲ್ಲಿ ಆರೋಪಿತರು ಕೆ ಎಸ್ ಆರ್ ಟಿ ಸಿ ನೌಕರರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು ಎನ್ನುವುದು ನಿಜ. ಅವರಿಗೆ ಸಿಟಿಂಗ್ ಫೀ ಆಗಿ 54,050ರೂಪಾಯಿ ಪಾವತಿಯಾಗಿತ್ತು ಎಂದರೆ ಸಾಕ್ಷಿಯು ಅದನ್ನು ಪರಿಗಣಿಸಿದ್ದೇನೆ ಎನ್ನುತ್ತಾರೆ. ಇವೆಲ್ಲವನ್ನು ಪರಿಗಣಿಸಿದರೆ ಅವರ ಚೆಕ್ ಅವಧಿಯ ಒಟ್ಟು ವೇತನ ಆದಾಯ 8,04,027ರೂಪಾಯಿ ಆಗುತ್ತದೆ ಎಂದರೆ ಸರಿಯಲ್ಲ.

52.ಆರೋಪಿತರ ಮನೆಯನ್ನು ನಾನು ಶೋಧನೆ ಮಾಡಿದಾಗ ಅಲ್ಲಿ ತೆಂಗಿನಕಾಯಿ ಮತ್ತು

ಕೊಬ್ಬರಿ ಇರುವುದು ಕಂಡುಬಂದಿತ್ತು ಎಂದರೆ ಸರಿ. ಸದರಿ ತೆಂಗಿನಕಾಯಿ ಮತ್ತು ಕೊಬ್ಬರಿ ಆರೋಪಿತರ ಹೆಂಡತಿಗೆ ಸೇರಿತ್ತು ಅದನ್ನು ಅವರು ಚನ್ನರಾಯಪಟ್ಟಣದ ವ್ಯವಸಾಯೋತ್ಪನ್ನ ಸಮಿತಿ ಇವರಿಗೆ ಮಾರಾಟ ಮಾಡಿದ್ದು ಅದರ ಬಾಬ್ತು ಈಗ ತೋರಿಸಿದ ದಾಖಲೆಯಂತೆ 34,080ರೂಪಾಯಿ ಚೆಕ್ ಮೂಲಕ ಬಂದಿತ್ತು ಎಂದರೆ ಸಾಕ್ಷಿಯು ಈ ಬಗ್ಗೆ ತೋಟಗಾರಿಕಾ ಇಲಾಖೆಯ ಸಹಾಯಕ ಉಪನಿರ್ದೇಶಕರಿಂದ ಮಾಹಿತಿಕೇಳಿದ್ದು ಅವರು ಅವರ ತೋಟದ ನಿವ್ವಳ ಆದಾಯ 2,21,520ರೂಪಾಯಿ ಎಂದು ಮಾಹಿತಿ ನೀಡಿದ್ದನ್ನು ಪರಿಗಣಿಸಿದ್ದೇನೆ ಎನ್ನುತ್ತಾರೆ. ಸಾಕ್ಷಿಗೆ ತೋರಿಸಿದ ಈ ಎರಡೂ ದಾಖಲೆಗಳನ್ನು **ನಿಡಿ-9 ಮತ್ತು 10** ಎಂದು ಗುರುತಿಸಲಾಯಿತು. ಆರೋಪಿತರು ತಮ್ಮ ಹೆಂಡತಿಗೆ ಸೇರಿದ ಸರ್ವೆ ನಂಬರ್ 10ರಲ್ಲಿ ಬೆಳೆದ ತೆಂಗಿನಕಾಯಿ ಮತ್ತು ಕೊಬ್ಬರಿಯನ್ನು ಕೃಷಿ ಉತ್ಪನ್ನ ಮಾರಾಟ ಮಾರುಕಟ್ಟೆ ಸಮಿತಿಗೆ ಮಾರಾಟ ಮಾಡಿದ್ದು ಅದರಿಂದ ಅವರಿಗೆ 26,980ರೂಪಾಯಿ ಆದಾಯ ಬಂದಿತ್ತು ಎಂದರೆ ಇವೆಲ್ಲವೂ ಸೇರಿ ನಾನು ತೋಟಗಾರಿಕಾ ಇಲಾಖೆಯಿಂದ ಮಾಹಿತಿ ಕೇಳಿದ್ದು ಅವರು ನೀಡಿದ ಮಾಹಿತಿಯಂತೆ ಪರಿಗಣಿಸಿದ್ದೇನೆ ಎನ್ನುತ್ತಾರೆ. ಈ ದಾಖಲೆಗಳನ್ನು **ನಿಡಿ-11 ಮತ್ತು 12** ಎಂದು ಗುರುತಿಸಲಾಯಿತು.

53.ಈಗ ತೋರಿಸಿದ ದಾಖಲೆ ಆರೋಪಿತರ ಹೆಂಡತಿ ಸ.ನಂ.103/5ರಲ್ಲಿ ಬೆಳೆದ ತೆಂಗಿನಕಾಯಿ ಮತ್ತು ಕೊಬ್ಬರಿಯನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಮಾರಗಾಟ ಮಾಡಿದ್ದರು ಅದರಿಂದ ಅವರಿಗೆ 13,360ರೂಪಾಯಿ ಚೆಕ್ ಮೂಲಕ ಬಂದಿತ್ತು ಎಂದರೆ ಸಾಕ್ಷಿಯು ಎಲ್ಲಾ ಸರ್ವೆ ನಂಬರಿನ ಆದಾಯದ ಬಗ್ಗೆ ತೋಟಗಾರಿಕಾ ಇಲಾಖೆಯಿಂದ ಮಾಹಿತಿ ಪಡೆದು ಪರಿಗಣಿಸಿದ್ದೇನೆ ಎನ್ನುತ್ತಾರೆ. ಸಾಕ್ಷಿಗೆ ತೋರಿಸಿದ ಈದಾಖಲೆಯನ್ನು **ನಿಡಿ-13** ಎಂದು ಗುರುತಿಸಲಾಯಿತು. ಇದು ಒಟ್ಟು 4 ಹಾಳೆಗಳನ್ನೊಳಗೊಂಡಿರುತ್ತದೆ. ಈ ಎಲ್ಲಾ ವಿವರವನ್ನು ದಾಖಲೆಯೊಂದಿಗೆ ಆರೋಪಿತರು ಹಾಜರುಪಡಿಸಿದ್ದರೂ ಕೂಡ ನಾನು ಅದನ್ನು ಪರಿಗಣಿಸಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಯಲ್ಲಿ ಕೊಬ್ಬರಿಯ ಬಗ್ಗೆ ಬಂದಿಲ್ಲ ಎಂದರೆ ಸಾಕ್ಷಿಯು ಅವುಗಳ ಮಾಹಿವುತಿ ಕೂಡ ಕೇಳಿದ್ದೆನು ಅವರು ನೀಡಿದ ವರದಿಯನ್ನು ಪರಿಗಣಿಪಿಸಿರುತ್ತೇನೆ ಎನ್ನುತ್ತಾರೆ. ಉದ್ದೇಶಪೂರ್ವಕವಾಗಿ ಅವೆಲ್ಲವನ್ನು ಪರಿಗಣಿಸಿಲ್ಲ ಎಂದರೆ ಸರಿಯಲ್ಲ.

54.ಈಗ ತೋರಿಸಿದ ದಾಖಲೆಯಂತೆ ಆರೋಪಿತರು ತಮ್ಮ ಜಮೀನಿನಲ್ಲಿ ಬೆಳೆದ ಕೊಬ್ಬರಿಯನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಮಾರಾಟ ಮಾಡಿದ್ದರು ಅದರಿಂದಾಗಿ ಅವರಿಗೆ 15,330ರೂಪಾಯಿ ಆದಾಯ ಬಂದಿತ್ತು, ಅದನ್ನು ಕೂಡ ನಾನು ಪರಿಗಣಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ತೋರಿಸಿದ ದಾಖಲೆಯನ್ನು ನಿಡಿ-14 ಎಂದು ಗುರುತಿಸಲಾಯಿತು. ಅದು 4 ಹಾಳೆಗಳನ್ನೊಳಗೊಂಡಿರುತ್ತದೆ.

55.ಚನ್ನರಾಯಪಟ್ಟಣದ ಅಮಾನಿಕೆರೆಯಲ್ಲಿ ಆರೋಪಿತರ ಹೆಂಡತಿಗೆ ಸ.ನಂ.135/3ರಲ್ಲಿ 37ಗುಂಟೆ ಜಮೀನು ಇತ್ತು ಎಂದರೆ ಸರಿ. ಹಾಗೆಯೇ 138/1ಡಿಯಲ್ಲೂ 17ವರೆ ಗುಂಟೆ ಜಮೀನು ಇತ್ತು ಎಂದರೆ ಸಾಕ್ಷಿಯು ಅದನ್ನು ಪರಿಗಣಿಸಿದ್ದೇನೆ ಎನ್ನುತ್ತಾರೆ. ಹಾಗೆಯೇ ಸ.ನಂ.10/10ರಲ್ಲಿ 26 ಗುಂಟೆ ಜಮೀನು ಇತ್ತು ಎಂದರೆ ಸರಿ. ಅದನ್ನು ಪರಿಗಣಿಸಿದ್ದೇನೆ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು 138/1ಡಿಯಲ್ಲಿ 12ವರೆ ಗುಂಟೆ ರೈಲ್ವೆಗೆ ಭೂಸ್ವಾಧೀನವಾಗಿತ್ತು, 5 ಗುಂಟೆ ಮಾತ್ರ ಉಳಿದಿತ್ತು ಅದನ್ನು ಪರಿಗಣಿಸಿದ್ದೇನೆ ಎನ್ನುತ್ತಾರೆ. ಆ ಸ್ವತ್ತು ಆರೋಪಿತರ ಹೆಂಡತಿಯ ಸ್ವಾಧೀನದಲ್ಲಿ ಇದ್ದಷ್ಟು ದಿನ ಆದಾಯವನ್ನು ಪರಿಗಣಿಸಿಲ್ಲ ಎಂದರೆ ಸರಿಯಲ್ಲ. ಆ ಜಮೀನಿನಲ್ಲಿ ಸುಮಾರು 100 ತೆಂಗಿನಮರಗಳಿದ್ದು ಅದರ ಇಳುವರಿ ಆದಾಯವನ್ನು ನಾನು ಉದ್ದೇಶಪೂರ್ವಕವಾಗಿ ಪರಿಗಣಿಸಿಲ್ಲ ಎಂದರೆ ಸರಿಯಲ್ಲ.

56.ಆರೋಪಿತರು ಹಾಜರುಪಡಿಸಿದ ದಾಖಲೆಗಳಂತೆ ಮತ್ತು ನನಗೆ ತನಿಖಾಕಾಲದಲ್ಲಿ ಕಂಡುಬಂದಂತೆ ಆರೋಪಿತರ 2ನೇ ಮಗ ಶೇಖರ ಇಂಜಿನಿಯರಿಂಗ್ ವಿದ್ಯಾರ್ಥಿ ಆಗಿದ್ದರು ಎಂದರೆ ನಿಜ.ಅವರ ವಿದ್ಯಾಭ್ಯಾಸ ಮುಗಿದ ನಂತರ ಅವರು ಹಲವಾರು ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು 4 ಕಂಪೆನಿಗಳಲ್ಲಿ ಕೆಲಸ ಮಾಡಿರುತ್ತಾರೆ ಎನ್ನುತ್ತಾರೆ. ಅವರು ಎಲ್ಲೆಲ್ಲಿ ಯಾವ ವರ್ಷದಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಅವರಿಗೆ ಎಷ್ಟು ಸಂಬಳ ಬರುತ್ತಿತ್ತೆನ್ನುವುದನ್ನು ಆರೋಪಿತರು ವಿವರ ನೀಡಿದ್ದರು ಎಂದರೆ ಸರಿ. ನನ್ನ ತನಿಖಾ ಕಾಲದಲ್ಲಿ ಅವರು ಕೆಲಸ ಮಾಡುತ್ತಿದ್ದ ಸಂಸ್ಥೆಯವರನ್ನು ವಿಚಾರಣೆ ಮಾಡಿ ಮಾಹಿತಿ ಪಡೆದುಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಸಂಸ್ಥೆಯವರು ನೀಡಿದ ಮಾಹಿತಿಯನ್ನು ಪರಿಗಣಿಸಿರುತ್ತೇನೆ ಎನ್ನುತ್ತಾರೆ. ನಾನು ಯಾರನ್ನು ವಿಚಾರಣೆ ಮಾಡಿ ಮಾಹಿತಿ

ಪಡೆದುಕೊಂಡಿದ್ದೆಂದು ಕಾಣಿಸಿಲ್ಲ ಎಂದರೆ ಸಾಕ್ಷಿಯು ಅವರ ಮಗ ಶೇಖರನ 3 ಬ್ಯಾಂಕ್ ಖಾತೆಯನ್ನು ಪರಿಶೀಲಿಸಿದಾಗ ಅದರಲ್ಲಿ ಹಣ ಇರಲಿಲ್ಲ ಆದ್ದರಿಂದ ಅವರು ಕೆಲಸ ಮಾಡಿದ ಸಂಸ್ಥೆಯನ್ನು ವಿಚಾರಣೆ ಮಾಡುವ ಪ್ರಮೇಯವೇ ಬರುವುದಿಲ್ಲ ಎನ್ನುತ್ತಾರೆ. ಶೇಖರ್ ರವರ ಹೆಸರಿನಲ್ಲಿ ಚಖಾತೆಯಲ್ಲಿ 7ಲಕ್ಷ ರೂಪಾಯಿ ಬ್ಯಾಲೆನ್ಸ್ ಇತ್ತು ಎಂದರೆ ಸಾಕ್ಷಿಯು ದಿಃ31-3-2009ಕ್ಕೆ ಅವರ ಬ್ಯಾಂಕ್ ಖಾತೆಯಲ್ಲಿ ಯಾವುದೇ ಮೊತ್ತ ಇರಲಿಲ್ಲ ಎನ್ನುತ್ತಾರೆ. ಅವರ ಬ್ಯಾಂಕ್ ಖಾತೆಯಲ್ಲಿ 7ಲಕ್ಷ ರೂ ಮೊತ್ತ ಇದ್ದ ಬಗ್ಗೆ ಆರೋಪಿತರು ದಾಖಲೆ ಕೊಟ್ಟಿದ್ದರೂ ಕೂಡ ಅದನ್ನು ಪರಿಗಣಿಸಿಲ್ಲ ಎಂದರೆ ಸರಿಯಲ್ಲ. ಈಗ ತೋರಿಸಿದ ನಿಪಿ-83 ರಲ್ಲಿ ಶೇಖರ್ ರವರ ಖಾತೆಯಲ್ಲಿ 7ಲಕ್ಷ ರೂಪಾಯಿ ಇರುವುದು ಕಂಡುಬರುತ್ತದೆ ಎಂದರೆ ಸಾಕ್ಷಿಯು 31-3-2009ಕ್ಕೆ ಯಾವುದೇ ಮೊತ್ತ ಇರಲಿಲ್ಲ ಎನ್ನುತ್ತಾರೆ. ದುರುದ್ದೇಶದಿಂದ ನಾನು ಆ 7ಲಕ್ಷ ರೂಪಾಯಿ ಹಣವನ್ನು ಆರೋಪಿತರ ಆದಾಯಕ್ಕೆ ಪರಿಗಣಿಸಿಲ್ಲ ಎಂದರೆ ಸರಿಯಲ್ಲ. ಈ ಸಂಬಂಧವಾಗಿ ಆರೋಪಿತರು ಬ್ಯಾಂಕಿನವರು ನೀಡಿರುವ ಸರ್ಟಿಫಿಕೇಟ್ ಕೂಡ ಹಾಜರುಪಡಿಸಿದ್ದರು ಅದನ್ನು ನಾನು ಪರಿಗಣಿಸಿಲ್ಲ ಎಂದರೆ ಸಾಕ್ಷಿಯು ಅನುಬಂಧ 1 ರಿಂದ 23 ರಲ್ಲಿ ಅವರು ಹೇಳಿಕೊಂಡಿದ್ದರು ಅಷ್ಟು ಬಿಟ್ಟರೆ ದಾಖಲೆನೀಡಿಲ್ಲ ಬ್ಯಾಂಕ್ ನವರು ನೀಡಿದ ದಾಖಲೆ ಪರಿಗಣಿಸಿರುತ್ತೇನೆ ಎನ್ನುತ್ತಾರೆ.

56.ಆರೋಪಿತರ ಹೆಂಡತಿ 3 ಲಕ್ಷ ರೂಪಾಯಿ ಕೃಷಿ ಸಾಲ ಪಡೆದಿದ್ದರು ಎಂದರೆ ಸಾಕ್ಷಿಯು ಹೌದು ಅದನ್ನು ಆದಾಯಲೆಕ್ಕಕ್ಕೆ ಪರಿಗಣಿಸಿರುತ್ತೇನೆ ಎನ್ನುತ್ತಾರೆ. ಸಾಕ್ಷಿಯು 100ಗ್ರಾಂ ಚಿನ್ನ ಅಡವಿಟ್ಟು 3 ಲಕ್ಷ ರೂ ಕೃಷಿ ಸಾಲ ಪಡೆದಿದ್ದು ಎನ್ನುತ್ತಾರೆ.

(ಆರೋಪಿತರ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಗಿದೆ)

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**